**ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ತಿ. ನರಸೀಪುರ**

**ಸಿಸಿ ಸಂಖ್ಯೆ: 2143/2022**

ಚಾ.ಸಾ-02, ಫ್ರಾ.ಸಾ-03

| | | |
|---|---|---|
| ಹೆಸರು | : | ನಟರಾಜು |
| ತಂದೆಯ ಹೆಸರು | : | ಲೇಟ್ ದೊಡ್ಡಸಿದ್ದಯ್ಯ |
| ವಯಸ್ಸು | : | 51 ವರ್ಷ |
| ವೃತ್ತಿ | : | ವ್ಯವಸಾಯ |
| ವಾಸ | : | ಹೊಸತಿರುಮಕೂಡಲು,<br>ತಿ.ನರಸೀಪುರ ಪಟ್ಟಣ. |

**ದಿನಾಂಕ 18.12.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

2022 ರ ಜೂನ್ ತಿಂಗಳಿನ ಒಂದು ದಿನ ಮಧ್ಯಾಹ್ನ 12.00 ಗಂಟೆ ಸಮಯದಲ್ಲಿ ತಿ. ನರಸೀಪುರ ಪಟ್ಟಣದ ಹಳೇ ತಿರುಮಕೂಡಲಿನಲ್ಲಿರುವ ಶ್ರೀ ಚೌಡೇಶ್ವರಿ ದೇವಸ್ಥಾನದ ಬಳಿ ಪೊಲೀಸರು ಸ್ಥಳವನ್ನು ಪರಿಶೀಲಿಸಿ, ಪಂಚನಾಮವನ್ನು ಜರುಗಿಸಿದ್ದು, ಆ ವೇಳೆಗೆ ನಾನು ಮತ್ತು ಫ್ರಾಸಾ-1, 2 ರವರು ಹಾಜರಿದ್ದು, ಪೊಲೀಸರು ನಮ್ಮ ಸಹಿಗಳನ್ನು ಪಂಚನಾಮಕ್ಕೆ ಪಡೆದಿರುತ್ತಾರೆ. ಸದರಿ ಪಂಚನಾಮ ಮತ್ತು ಅದರಲ್ಲಿರುವ ನನ್ನ ಸಹಿಯನ್ನು ಈಗ ನೋಡಿ ಗುರುತಿಸಿರುತ್ತೇನೆ. ಆ ಪಂಚನಾಮ ಈಗಾಗಲೇ ನಿಪಿ.2 ಎಂದು ಗುರುತಿಸಲ್ಪಟ್ಟಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.2(ಸಿ) ಎಂದು ಗುರುತಿಸಲಾಯಿತು.

ಸಿಸಿ ಸಂಖ್ಯೆ: 2143/2022

ಸ್ಥಳದಲ್ಲಿ ಆ ದೇವಸ್ಥಾನದ ಕಿಟಕಿಗಳು ಮತ್ತು ಆ ದೇವಸ್ಥಾನದ ಹುಂಡಿಗಳು ಬಿದ್ದಿದ್ದವು. ಅಲ್ಲಿ ಒಂದು ಟೋಪಿ ಬಿದ್ದಿತ್ತು.

ಆ ಕಿಟಕಿ ಮತ್ತು ಟೋಪಿಯನ್ನು ಈಗ ನೋಡಿ ಗುರುತಿಸಿದ್ದು, ಅವುಗಳು ಈಗಾಗಲೇ ಕ್ರಮವಾಗಿ ಎಂ.ಒ.1 ಮತ್ತು 3 ಎಂದು ಗುರುತಿಸಲ್ಪಟ್ಟಿವೆ.

**ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಭಾಗಶ: ಸಾಕ್ಷ್ಯ ನುಡಿದಿರುವುದರಿಂದ, ಮಾನ್ಯ ಎಪಿಪಿ ರವರು ಸಾಕ್ಷಿಯನ್ನು ಭಾಗಶ: ಪಾಟೀ ಸವಾಲು ಮಾಡಲು ಕೋರಿದ್ದು, ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಭಾಗಶ: ಸಾಕ್ಷ್ಯ ನುಡಿದಿರುವುದರಿಂದ, ಮಾನ್ಯ ಎಪಿಪಿ ರವರ ಕೋರಿಕೆಯನ್ನು ಪರಿಗಣಿಸಿ ಸಾಕ್ಷಿಯನ್ನು ಭಾಗಶ: ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದಃ**

ಪಂಚನಾಮದ ವೇಳೆಗೆ ಪೊಲೀಸರು ಈ ದಿನ ನ್ಯಾಯಾಲಯದ ಮುಂದೆ ಇರುವ ಬಾಗಿಲ ಬೀಗವನ್ನು ಜಪ್ತಿಪಡಿಸಿದರು ಎಂದರೆ ನನಗೆ ನೆನಪಿಲ್ಲ.

**ಪಾಟೀ ಸವಾಲುಃ ಶ್ರೀ ಎಂ.ಆರ್. ಆರೋಪಿತರ ಪರ ವಕೀಲರಿಂದ :**

ನಾನು ಪಂಚರಾಗಿ ಬರುವಂತೆ ಪೊಲೀಸರು ನನಗೆ ನೋಟೀಸ್ ನೀಡಿರಲಿಲ್ಲ. ಪಂಚನಾಮದ ವಿವರಗಳನ್ನು ನಾನು ಸಂಪೂರ್ಣವಾಗಿ ಓದಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)

ಓ ಹೇ ಕೇ ಸರಿ ಇದೆ

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂ., ತಿ.ನರಸೀಪುರ**

**ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ತಿ. ನರಸೀಪುರ**

**ಸಿಸಿ ಸಂಖ್ಯೆ: 2143/2022**

ಚಾ.ಸಾ–04, ಪ್ರಾ.ಸಾ–04

| | | |
|---|---|---|
| ಹೆಸರು | : | ಶಿವಮೂರ್ತಿ |
| ತಂದೆಯ ಹೆಸರು | : | ಶಿವಣ್ಣ |
| ವಯಸ್ಸು | : | 39 ವರ್ಷ |
| ವೃತ್ತಿ | : | ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಹೆಗ್ಗೋಟಾರ ಪಂಚಾಯಿತಿ, ಚಾಮರಾಜನಗರ ತಾಲ್ಲೂಕು, |
| ವಾಸ | : | ಚಾಮರಾಜನಗರ |

**ದಿನಾಂಕ 18.12.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

ಸೆಪ್ಟೆಂಬರ್ 2021 ರಿಂದ ಸೆಪ್ಟೆಂಬರ್ 2025 ರವರೆಗೆ ಚಾಮರಾಜನಗರ ತಾಲ್ಲೂಕಿನ ಬಿಸಲವಾಡಿ ಗ್ರಾಮ ಪಂಚಾಯಿತಿಯಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 19.07.2022ರಂದು ಚಾಮರಾಜನಗರದ ಬಿಸಲವಾಡಿ ಗ್ರಾಮದ ಚರ್ಚ್ ಬಳಿ ಆರೋಪಿತರನ್ನು ಹಿಡಿದಿರುವುದರಿಂದ ಅಲ್ಲಿಗೆ ಬರುವಂತೆ ತಿ.ನರಸೀಪುರ ಪೊಲೀಸ್ ಠಾಣೆಯ ಚಾ.ಸಾ 14 ರವರು ನನಗೆ ತಿಳಿಸಿದ್ದರು. ಆ ವೇಳೆಗೆ ನನ್ನೊಂದಿಗೆ ಚಾ.ಸಾ 5 ರವರು ಇದ್ದರು.

ನಂತರ ಪೊಲೀಸರು ನಮ್ಮನ್ನು ಸದರಿ ಸ್ಥಳಕ್ಕೆ ಕರೆದುಕೊಂಡು ಹೋದರು. ಪೊಲೀಸರು ಅವರ ಜೀಪಿನಲ್ಲಿ ಮತ್ತು ನಾವು ನಮ್ಮ ಮೋಟಾರು ಸೈಕಲ್ ನಲ್ಲಿ ಹೋಗಿದ್ದೇವು.

ಸದರಿ ಸ್ಥಳದ ಬಳಿ ಮೂರು –ನಾಲ್ಕು ಶೆಡ್ ಗಳು ಇದ್ದವು. ಪೊಲೀಸರು 6 ಜನರನ್ನು ಹಿಡಿದುಕೊಂಡು ಇದ್ದರು. ಅವರ ಬಳಿಯಿಂದ ವಶಪಡಿಸಿಕೊಂಡು ಇದ್ದ ಸಾಮಾಗ್ರಿಗಳನ್ನು ಅಲ್ಲಿ ಇಟ್ಟಿದ್ದರು. ಆ ಸಾಮಾಗ್ರಿಗಳಲ್ಲಿ 05ಗ್ಯಾಸ್ ಸಿಲಿಂಡರ್ ಗಳು, 01 ಆಮ್ಲಜನಕ ಸಿಲಿಂಡರ್, ಗ್ಯಾಸ್ ಕಟ್ಟರ್, ಕಬ್ಬಿಣ ಕತ್ತರಿಸುವ ಕಟ್ಟರ್, ಸ್ಕ್ರೂ ಡ್ರೈವರ್, 02 ಮಚ್ಚುಗಳು, 01 ಕಬ್ಬಿಣದ ರಾಡು, 01 ಕಬ್ಬಿಣದ ಹಾರೆ, 01 ಗ್ಯಾಸ್ ಪೈಪು ಮತ್ತು ಒಂದು ಪೆಟ್ಟಿಗೆ ಇದ್ದವು.

ಸದರಿ ಪೆಟ್ಟಿಗೆಯನ್ನು ತೆರೆದಿದ್ದು, ಅದರಲ್ಲಿ ನಗದು ಹಣ ಮತ್ತು ನಾಣ್ಯದ ಹಣ ಇತ್ತು. ಅವುಗಳು ಆ ಪೆಟ್ಟಿಗೆಯಲ್ಲಿ ಒಂದು ಪ್ಲಾಸ್ಟಿಕ್ ಬಾಕ್ಸ್ ನಲ್ಲಿ ಇದ್ದವು. ಆ ಹಣ ರೂ. 3,89,800–00 ಆಗಿರುತ್ತದೆ. ನಾಣ್ಯದ ಹಣ ರೂ. 16,344–00 ಆಗಿರುತ್ತದೆ.

ಆ ಸಾಮಾಗ್ರಿಗಳಲ್ಲಿ ಬೆಳ್ಳಿ ಪದಾರ್ಥಗಳು ಇದ್ದು, 02 ಬೆಳ್ಳಿ ಬಸವ ಚಿಕ್ಕದ್ದು, 02 ಬೆಳ್ಳಿ ಕಣ್ಣುಗಳು, 02 ಬೆಳ್ಳಿ ತಟ್ಟೆಗಳು ಬೆಂಡಾಗಿದ್ದವು, ಬೇರೆ ಬೇರೆ ರೀತಿಯ ಬೆಳ್ಳಿ ಮಾದರಿಯ ಪದಾರ್ಥಗಳು ಇದ್ದವು.

ಆ ಸಾಮಾಗ್ರಿಗಳಲ್ಲಿ 20ಕ್ಕಿಂತ ಹೆಚ್ಚು ಮೊಬೈಲ್ ಗಳು ಇದ್ದವು. ಸ್ಥಳದಲ್ಲಿ 02 ಮೋಟಾರ್ ಸೈಕಲ್ ಮತ್ತು ಒಂದು ಟಿ.ವಿ.ಎಸ್ ಮೊಪೆಡ್ ಇದ್ದವು.

ಪೊಲೀಸರು ಸ್ಥಳದಲ್ಲಿ ಪಂಚನಾಮವನ್ನು ಮಧ್ಯಾಹ್ನ 3.30 ಗಂಟೆಯಿಂದ 6.30 ಗಂಟೆ ಸಮಯದಲ್ಲಿ ಬರೆದಿರುತ್ತಾರೆ. ಪಂಚನಾಮಕ್ಕೆ ನಾನು, ಚಾಸಾ–5 ರವರು ಸಹಿ ಮಾಡಿದ್ದೆವು. ಆ ಪಂಚನಾಮದ ಪ್ರತಿಯನ್ನು ನಿಪಿ.3 ಎಂದು ಗುರುತಿಸಲಾಯಿತು.

ಸಿಸಿ ಸಂಖ್ಯೆ: **2143/2022**

ಸದರಿ ಸ್ಥಳದಲ್ಲಿ ಇದ್ದ 06 ವ್ಯಕ್ತಿಗಳನ್ನು ನೋಡಿದರೆ ಗುರುತಿಸುತ್ತೇನೆ. ಅವರಲ್ಲಿ ಈಗ ನ್ಯಾಯಾಲಯದ ಮುಂದೆ ಒಬ್ಬ ಇದ್ದು, ಅವರು 1ನೇ ಆರೋಪಿತನಾಗಿರುತ್ತಾನೆ.

**ಪಾಟೀ ಸವಾಲು : ಶ್ರೀ ಎಂ.ಆರ್. ವಕೀಲರಿಂದ 1ನೇ ಆರೋಪಿತನ ಪರವಾಗಿ**

ನಾನು ಮೂಗೂರು ದೇವಸ್ಥಾನಕ್ಕೆ 2019 ರಲ್ಲಿ ಹೋಗಿದ್ದೆ. ಆರೋಪಿತರು ಫ್ರಾನ್ಸಿಸ್ ಚರ್ಚ್ ಬಳಿ ವ್ಯಾಪಾರಕ್ಕಾಗಿ ಟೆಂಟ್ ಹಾಕಿದ್ದರು ಎಂದರೆ ಅವರು ಟೆಂಟ್ ಹಾಕಿದ್ದರು. ಆರೋಪಿತರು ಬೆಳಗ್ಗೆ ಕೆಲಸಕ್ಕೆ ಹೋದರೆ ಸಂಜೆ ಆ ಟೆಂಟ್ ಗೆ ಬರುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ.

ನಾನು ಸದರಿ ಸ್ಥಳಕ್ಕೆ ಮೊದಲ ಬಾರಿ ಹೋಗುವಾಗ ಪೊಲೀಸರು ನನಗೆ ನೋಟಿಸ್ ನೀಡಿರಲಿಲ್ಲ, ಎರಡನೇ ಬಾರಿ ಹೋದಾಗ ನೋಟಿಸ್ ನೀಡಿದ್ದರು. ಜಪ್ತಿ ಪಡಿಸಿದ ಹಣ ಎಷ್ಟು ಇತ್ತು ಎಂದು ನನಗೆ ಗೊತ್ತು.

ನನ್ನ ಸಮಕ್ಷಮ ಪೊಲೀಸರು ಏನನ್ನು ಜಪ್ತಿ ಪಡಿಸಿಲ್ಲ ಮತ್ತು ಪಂಚನಾಮ ಜರುಗಿಸಿಲ್ಲ ಎಂದರೆ ಸರಿಯಲ್ಲ. ಪೊಲೀಸರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)
ಓ ಹೇ ಕೇ ಸರಿ ಇದೆ

**ಹಿರಿಯ ದಿವಾಣಿ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾದಂ., ತಿ.ನರಸೀಪುರ**